

# ಗುಬ್ಬಚ್ಚಿ ಗೂಡು

## ಪಕ್ಷಿಗಳ ಉಳಿಸುವ ಹಾಡು



**ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳದ ಕೃಷಿಕರಾದ ನಿತ್ಯಾನಂದ ಶೆಟ್ಟಿ, ರಮ್ಯ ದಂಪತಿ, ಶಾಲೆಗಳಿಗೆ ತೆರಳಿ ಪಕ್ಷಿಗಳ ಮಹತ್ವದ ಬಗ್ಗೆ, ಅವುಗಳ ಉಳಿವಿನ ಬಗ್ಗೆ ಉಪನ್ಯಾಸ, ಕಾರ್ಯಾಗಾರ, ಪ್ರಾತ್ಯಕ್ಷಿಕೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.**

■ **ಈರಣ್ಣ ಬೆಂಗಾಲಿ**

ಜನಸಂಖ್ಯೆ ಹೆಚ್ಚಾಗಿ, ಗಿಡ ಮರಗಳ ಸಂಖ್ಯೆ ಕಡಿಮೆಯಾಗಿ ಹವಾಮಾನ ವೈಪರೀತ್ಯ ಹಲವು ದುಷ್ಪರಿಣಾಮಗಳನ್ನು ಉಂಟುಮಾಡುತ್ತಿದೆ. ಇಂಥ ವಾತಾವರಣದಲ್ಲಿ ಪಶುಪಕ್ಷಿಗಳ ಪರಿಸ್ಥಿತಿಯಂತೂ ಹೇಳತೀರದು. ಮನುಷ್ಯನ ತಪ್ಪಿನಿಂದಾಗಿ ಅವು ಮೂಕವಾಗಿ ನರಳುವಂತಾಗಿದೆ. ಪರಿಸರ ಸಮತೋಲನದಲ್ಲಿ ಮಹತ್ವದ ಪಾತ್ರ ವಹಿಸುವ ಇವುಗಳ ಉಳಿವು ಪ್ರಶ್ನೆಯಾಗಿ ಉಳಿದಿದೆ.

ಈ ಪರಿಸ್ಥಿತಿಯಲ್ಲಿ ಪಕ್ಷಿಗಳಿಗಾಗಿಯೇ ತಮ್ಮ ಎರಡು ಎಕರೆ ಜಮೀನು ಮೀಸಲಿಟ್ಟು, ನೀರು, ಕಾಳುಕಡಿ ನೀಡುತ್ತಿರುವ ದಂಪತಿಯ ಕಾರ್ಯ ಗಮನಸೆಳೆಯುವಂತಿದೆ. 'ಗುಬ್ಬಚ್ಚಿ ಗೂಡು' ಎಂಬ ಹೆಸರಲ್ಲಿ ಪಕ್ಷಿಗಳ ಉಳಿವು ಮತ್ತು ಸಸ್ಯಸಂಕುಲದ ಮಹತ್ವವನ್ನು ತಿಳಿಸಲು ಜಾಗೃತಿಯ ಅಭಿಯಾನ ಮಾಡುತ್ತಿರುವ ಇವರ ಕಾರ್ಯ ಶ್ಲಾಘನೀಯ.

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳದ ಎಲಿಯನಡುಗೋಡು ಗ್ರಾಮದ ಕೃಷಿಕರಾದ